JULY 17, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

<><><>

- **ಧಾರವಾಡ, ಬಾಗಲಕೋಟೆ** ಸೇರಿದಂತೆ, 4 ಜಿಲ್ಲೆಗಳ, ಅಮೃತ ಭಾರತ ರೈಲು ನಿಲ್ದಾಣಗಳು, ಇಂದು ಪ್ರಧಾನಮಂತ್ರಿಯವರಿಂದ, ಲೋಕಾರ್ಪಣೆ.
- **'ಭಾರತ್ ಟೆಕ್ಸ್ 2026'**; ರಾಜ್ಯದಿಂದ, 2 ಸಾವಿರದ 8 ನೂರು ಕೋಟಿ ಮೌಲ್ಯದ, 12 ಹೂಡಿಕೆ ಒಪ್ಪಂದ.
- **ಅರ್ಹ ನಾಗರಿಕರು,** ಮತದಾರರ ಪಟ್ಟಿಯಲ್ಲಿ, ಹೆಸರು ನೋಂದಾಯಿಸಲು, ಸ್ವೀಪ್ ಸಮಿತಿಯಿಂದ, ಜನ ಜಾಗೃತಿ.
- **ಖೇಲೋ ಇಂಡಿಯಾ:** ಧಾರವಾಡದಲ್ಲಿ, ಇಂದು ಮತ್ತು ನಾಳೆ, ಮಲ್ಲಕಂಬ ಕ್ರೀಡೋತ್ಸವ.

<><><>

**ಈಗ ವಾರ್ತೆಗಳ ವಿವರ**

<><><>

**ಕೇಂದ್ರ ಪುರಸ್ಕೃತ,** ಅಮೃತ ಭಾರತ ರೈಲು ನಿಲ್ದಾಣ ಯೋಜನೆಯಡಿ, ಧಾರವಾಡ ಜಿಲ್ಲೆಯ ಅಳ್ನಾವರ, ಬಾಗಲಕೋಟೆ ಜಿಲ್ಲೆಯ ಬದಾಮಿ, ದಕ್ಷಿಣಕನ್ನಡ ಜಿಲ್ಲೆಯ ಬಂಟ್ವಾಳ ಹಾಗೂ ಕೊಪ್ಪಳದಲ್ಲಿ, ನವೀಕರಣಗೊಂಡು, ಮೇಲ್ದರ್ಜೆಗೇರಿಸಲಾದ, ರಾಜ್ಯದ ನಾಲ್ಕು ರೈಲು ನಿಲ್ದಾಣಗಳನ್ನು, ಪ್ರಧಾನಮಂತ್ರಿ ನರೇಂದ್ರ ಮೋದಿ, ವರ್ಚುವಲ್ ವೇದಿಕೆಯಲ್ಲಿ ಇಂದು ಮಧ್ಯಾಹ್ನ 3.30ಕ್ಕೆ ಲೋಕಾರ್ಪಣೆಗೊಳಿಸಲಿದ್ದಾರೆ. ಅಳ್ನಾವರ ರೈಲು ನಿಲ್ದಾಣವನ್ನು, 17 ಕೋಟಿ 20 ಲಕ್ಷ ರೂಪಾಯಿ ವೆಚ್ಚದಲ್ಲಿ, ಕೊಪ್ಪಳದ ರೈಲು ನಿಲ್ದಾಣವನ್ನು 21 ಕೋಟಿ ಒಂದು ಲಕ್ಷ ರೂಪಾಯಿ ವೆಚ್ಚದಲ್ಲಿ, ಬಾಗಲಕೋಟೆ ಜಿಲ್ಲೆಯ, ಬದಾಮಿ ರೈಲು ನಿಲ್ದಾಣವನ್ನು, 15 ಕೋಟಿ ಒಂದು ಲಕ್ಷ ರೂಪಾಯಿ ಹಾಗೂ ದಕ್ಷಿಣಕನ್ನಡ ಜಿಲ್ಲೆ, ಬಂಟ್ವಾಳದ ರೈಲು ನಿಲ್ದಾಣವನ್ನು, 26 ಕೋಟಿ 18 ಲಕ್ಷ ರೂಪಾಯಿ ವೆಚ್ಚದಲ್ಲಿ, ಮೇಲ್ದರ್ಜೆಗೇರಿಸಲಾಗಿದೆ.

<><><>

**ವಿಶ್ವದ ಪ್ರಮುಖ ಜವಳಿ ಸಮಾವೇಶ,** 'ಭಾರತ್ ಟೆಕ್ಸ್–2026' ನಲ್ಲಿ, ಕರ್ನಾಟಕ ಉತ್ತಮ ಸಾಧನೆ ಮಾಡಿದ್ದು, ವಿವಿಧ ಸಂಸ್ಥೆಗಳೊಂದಿಗೆ, 2 ಸಾವಿರದ 8 ನೂರಾ 21 ಕೋಟಿ ರೂಪಾಯಿ ಮೌಲ್ಯದ, 12 ಹೂಡಿಕೆ ಒಪ್ಪಂದಗಳಿಗೆ, ಸಹಿ ಹಾಕಿದೆ. ಹೊಸ ದಿಲ್ಲಿಯ, ಭಾರತ ಮಂಟಪದಲ್ಲಿ ಆಯೋಜಿಸಲಾಗಿದ್ದ, ಕಾರ್ಯಕ್ರಮದಲ್ಲಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಕಾರ್ಯದರ್ಶಿ ರೋಹಿಣಿ ಸಿಂಧೂರಿ ಮಹತ್ವದ ಒಪ್ಪಂದಗಳಿಗೆ, ಸಹಿ ಮಾಡಿದರು. ಈ ಹೂಡಿಕೆಯಿಂದ, ರಾಜ್ಯದಲ್ಲಿ 11 ಸಾವಿರದ 20ಕ್ಕೂ ಹೆಚ್ಚು ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ ಎಂದು, ಅವರು ತಿಳಿಸಿದರು. ಕಲಬುರಗಿಯಲ್ಲಿ ಸಾವಿರ ಎಕರೆ ವಿಸ್ತೀರ್ಣದ 'ಪಿ.ಎಂ. ಮಿತ್ರ, ಮೆಗಾ ಟೆಕ್ಸ್‌ಟೈಲ್ಸ್ ಪಾರ್ಕ್', ದೊಡ್ಡಬಳ್ಳಾಪುರ, ಶಿಗ್ಗಾವಿ ಹಾಗೂ ದಾವಣಗೆರೆಯ, ಜವಳಿ ಪಾರ್ಕ್‌ಗಳು, ಕರ್ನಾಟಕವನ್ನು, ದೇಶದ ಪ್ರಮುಖ ಜವಳಿ ಉತ್ಪಾದನಾ ಕೇಂದ್ರವನ್ನಾಗಿ ರೂಪಿಸಲಿವೆ ಎಂದು, ಅವರು ವಿಶ್ವಾಸ ವ್ಯಕ್ತಪಡಿಸಿದರು.

<><><>

**ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ** – ಇಸ್ರೋ, ಬೆಂಗಳೂರಿನ ಪ್ರಧಾನ ಕಚೇರಿಗೆ, ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ, ಭೇಟಿ ನೀಡಿ, ಹಿರಿಯ ವಿಜ್ಞಾನಿಗಳೊಂದಿಗೆ ಸಮಾಲೋಚಿಸಿದರು. ಸಾಮಾಜಿಕ ಮಾಧ್ಯಮ, ಫೇಸ್‌ಬುಕ್‌ನಲ್ಲಿ ಈ ವಿಷಯ ತಿಳಿಸಿರುವ ಸಚಿವರು, ಪ್ರಧಾನಮಂತ್ರಿ ಅವರ ದೂರದೃಷ್ಟಿ ನಾಯಕತ್ವದಲ್ಲಿ, ನವಭಾರತದ ಚೈತನ್ಯವನ್ನು ಪ್ರತಿಬಿಂಬಿಸುವಂತೆ, ಇಸ್ರೋ ನಾವೀನ್ಯತೆ, ನಿಖರತೆ ಮತ್ತು ಆತ್ಮನಿರ್ಭರತೆಯತ್ತ, ತನ್ನ ಅಚಲ ಬದ್ಧತೆಯನ್ನು ಪ್ರದರ್ಶಿಸುತ್ತಿದೆ ಎಂದು, ಸಂತಸ ವ್ಯಕ್ತ ಪಡಿಸಿದ್ದಾರೆ.

<><><>

**ಧಾರವಾಡ ಬಳಿಯ, ಸತ್ತೂರಿನ** ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ದಂತ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಆಸ್ಪತ್ರೆಯಲ್ಲಿ, ಕಳೆದ 25 ವರ್ಷಗಳಲ್ಲಿ, ಸೀಳು ತುಟಿ ಹಾಗೂ ಸೀಳು ಅಂಗುಳಿನ 10 ಸಾವಿರ ಮಕ್ಕಳಿಗೆ, ಶಸ್ತ್ರ ಚಿಕಿತ್ಸೆಗಳನ್ನು ಯಶಸ್ವಿಯಾಗಿ, ನೆರವೇರಿಸಲಾಗಿದೆ. ಸ್ಮೈಲ್ ಟ್ರೇನ್ ಯೋಜನೆಯನ್ನು, 2001 ರಿಂದ ಜಾರಿಗೆ ತರಲಾಗಿದ್ದು, ಉಚಿತ ಶಸ್ತ್ರಚಿಕಿತ್ಸೆ, ಆರೈಕೆ, ಆಹಾರ ಮತ್ತು ಔಷಧಿಗಳೊಂದಿಗೆ, ಮಕ್ಕಳನ್ನು ಸಲುಹಲಾಗಿದೆ. ಸೀಳು ತುಟಿ ಹಾಗೂ ಅಂಗುಳ ಹೊಂದಿರುವ ಮಕ್ಕಳಲ್ಲಿ, ಮಾತು, ಆಲಿಕೆ ಮತ್ತು ಆಹಾರ ಸಮಸ್ಯೆಗಳನ್ನು ಪರಿಹರಿಸಲು, ವಿಶೇಷ ಆದ್ಯತೆ ನೀಡಲಾಗಿದೆ. ಬಾಯಿ ಮತ್ತು ಮ್ಯಾಕ್ಸಿಲೊಫೇಶಿಯಲ್ ಶಸ್ತ್ರಚಿಕಿತ್ಸಾ ವಿಭಾಗದ, ಪ್ರಾಧ್ಯಾಪಕ ಹಾಗೂ ಮುಖ್ಯಸ್ಥ, ಡಾಕ್ಟರ್ ವೆಂಕಟೇಶ ಆನೆಹೊಸೂರ, ಪ್ರದೇಶ ಸಮಾಚಾರಕ್ಕಾಗಿ, ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

**ಡಾ. ವೆಂಕಟೇಶ ಆನೆಹೊಸೂರ ಧ್ವನಿ 55 ಸೆಕೆಂದುಗಳು**

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(37 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಪ್ರತಿಯೊಬ್ಬ ಅರ್ಹ ನಾಗರಿಕರು,** ಮತದಾರರ ಪಟ್ಟಿಯಲ್ಲಿ, ಹೆಸರು ನೋಂದಾಯಿಸಿಕೊಂಡು, ಕಡ್ಡಾಯವಾಗಿ ಮತದಾನ ಮಾಡುವಂತೆ, ಜಾಗೃತಿ ಮೂಡಿಸಲು, ವಿಶೇಷ ಮತದಾರರ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು, ರಾಜ್ಯ ಸ್ವೀಪ್ ನೋಡಲ್ ಅಧಿಕಾರಿ, ಪಿ.ಎಸ್. ವಸ್ತ್ರದ ತಿಳಿಸಿದ್ದಾರೆ. ಮಂಡ್ಯದ, ಜಿಲ್ಲಾ ಪಂಚಾಯಿತಿಯ, ಕಾವೇರಿ ಸಭಾಂಗಣದಲ್ಲಿ, ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಹಾಗೂ ಸ್ವೀಪ್ ಚಟುವಟಿಕೆ, ಪ್ರಗತಿ ಪರಿಶೀಲಿಸಿ, ಅವರು ಮಾತನಾಡಿದರು. ಮತದಾನದ ಪ್ರಕ್ರಿಯೆ, ಮತದಾನದ ಮಹತ್ವ, ವಿಶೇಷ ಚೇತನ ಮತದಾರರಿಗೆ ಚುನಾವಣಾ ಆಯೋಗದಿಂದ ಕಲ್ಪಿಸಲಾಗಿರುವ ಸೌಲಭ್ಯಗಳು ಹಾಗೂ ಮತದಾನದ ವೇಳೆ ಅನುಸರಿಸಬೇಕಾದ ಕ್ರಮಗಳ ಕುರಿತು, ಸಾರ್ವಜನಿಕರಿಗೆ ಸಮಗ್ರ ಮಾಹಿತಿ ನೀಡುವಂತೆ, ಯೋಜಿಸಲಾಗಿದೆ ಎಂದರು.

<><><>

**ಕೇಂದ್ರ ಚುನಾವಣಾ ಆಯೋಗದ ನಿರ್ದೇಶನದಂತೆ,** ರಾಜ್ಯ ಚುನಾವಣಾ ಆಯೋಗದ ಮಾರ್ಗದರ್ಶನದಲ್ಲಿ, ಧಾರವಾಡ ಜಿಲ್ಲೆಯ, ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಹಾಗೂ ಸ್ವೀಪ್ ಚಟುವಟಿಕೆ, ಭರದಿಂದ ಸಾಗಿದೆ. ಆಕಾಶವಾಣಿ ಧಾರವಾಡ ಕೇಂದ್ರ, ಇಂದು ರಾತ್ರಿ, 8 ರಿಂದ, 8 ಗಂಟೆ 45 ನಿಮಿಷಗಳ ವರೆಗೆ, ಆಯೋಜಿಸಿರುವ ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ, ಧಾರವಾಡ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ, ಆರ್. ಸ್ನೇಹಲ್ ಪಾಲ್ಗೊಂಡು, ಎಸ್.ಐ.ಆರ್ ಕುರಿತ, ಕೇಳುಗರ ಪ್ರಶ್ನೆ ಹಾಗೂ ಸಂದೇಹಗಳಿಗೆ ನೇರವಾಗಿ ಉತ್ತರಿಸಲಿದ್ದಾರೆ.

<><><>

**ದಾವಣಗೆರೆ ಜಿಲ್ಲೆಯಲ್ಲಿ,** ಸ್ಥಳಾಂತರ, ಶಾಶ್ವತ ವಲಸೆ, ಮರಣ ಹಾಗೂ ದ್ವಿಪ್ರತಿ ಸೇರಿದಂತೆ, ವಿವಿಧ ಕಾರಣಗಳಿಗಾಗಿ, 13 ಸಾವಿರದ 3 ನೂರಾ 87 ಮತದಾರರನ್ನು, ಪಟ್ಟಿಯಿಂದ ತೆಗೆದುಹಾಕಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದ್ದಾರೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ** ಅವರ ಆಶಯದಂತೆ, ಖೇಲೋ ಇಂಡಿಯಾ, ಫಿಟ್ ಇಂಡಿಯಾ ಉಪಕ್ರಮದಡಿ, ಕೇಂದ್ರ ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯ, ಗ್ರಾಮೀಣ ಸೊಗಡಿನ, ದೇಸಿ ಕ್ರೀಡೆ ಮಲ್ಲಕಂಬವನ್ನು ಪುನರುಜ್ಜೀವಿತಗೊಳಿಸಿ, ಪ್ರೋತ್ಸಾಹಿಸುತ್ತಿದೆ. ಧಾರವಾಡದ ನೂತನ ಈಜುಗೊಳ ಹಾಗೂ ಕ್ರೀಡಾ ಸಂಕೀರ್ಣದಲ್ಲಿ, ಇಂದು ಮತ್ತು ನಾಳೆ, ರಾಜ್ಯ ಮಟ್ಟದ, 3ನೇ ಆವೃತ್ತಿಯ ಮಲ್ಲಕಂಬ ಸ್ಪರ್ಧೆಗಳು ಆಯೋಜಿತವಾಗಿವೆ. ವಿವಿಧ ವಿಭಾಗಗಳಲ್ಲಿ ಒಟ್ಟು 275 ಮಲ್ಲಕಂಬ ಪಟುಗಳು ಪಾಲ್ಗೊಳ್ಳಲಿದ್ದು, ನಾಲ್ಕು ಅಖಾಡಾಗಳು ಸಿದ್ಧಗೊಂಡಿವೆ ಎಂದು, ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ, ಸದಾನಂದ ಅಮರಾಪುರ, ತಿಳಿಸಿದ್ದಾರೆ.

<><><>

**ಸದಾನಂದ ಅಮರಾಪೂರ ಧ್ವನಿ (47) ಸೆಕೆಂದುಗಳು**

<><><>

**ಈಗ ಸಂಕ್ಷಿಪ್ತ ಸುದ್ದಿಗಳು:**

<><><>

**ರಾಷ್ಟ್ರೀಯ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕ್** – ನಬಾರ್ಡ್, 45ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ, ಬೆಂಗಳೂರಿನ ನಬಾರ್ಡ್ ಪ್ರಾದೇಶಿಕ ಕಚೇರಿ ಸಭಾಂಗಣದಲ್ಲಿ, ಇಂದು ಬೆಳಗ್ಗೆ 11 ಗಂಟೆಗೆ, ವಿಶೇಷ ಕಾರ್ಯಕ್ರಮ ನಡೆಯಲಿದೆ. ರಾಜ್ಯ ಹಣಕಾಸು ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ, ರಿತೇಶಕುಮಾರ ಸಿಂಗ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಬ್ಯಾಂಕಿಂಗ್ ಕ್ಷೇತ್ರದ ಹಿರಿಯ ಅಧಿಕಾರಿಗಳು ರಾಜ್ಯದ ವಿವಿಧ ಇಲಾಖೆಗಳ ಮುಖ್ಯಸ್ಥರು, ಪಾಲ್ಗೊಳ್ಳಲಿದ್ದಾರೆ.

<><><>

**ಬೆಂಗಳೂರು ಗ್ರಾಮಾಂತರ ಜಿಲ್ಲೆ,** ದೇವನಹಳ್ಳಿ ತಾಲೂಕು, ವಿಶ್ವನಾಥಪುರ ಗ್ರಾಮದಲ್ಲಿ, ವಿ.ಬಿ. ಜಿ ರಾಮ್ ಜಿ ಯೋಜನೆ ಅಡಿ ನಿರ್ಮಿಸಲಾದ, ಅಮೃತ ಸರೋವರ ಕೆರೆಯನ್ನು, ಜಿಲ್ಲಾ ಪಂಚಾಯಿತಿ ಸಿ.ಇ.ಓ. ಡಾಕ್ಟರ್ ವಾಸಂತಿ ವೀಕ್ಷಿಸಿದರು.

<><><>

**ರಾಜ್ಯ ಸರ್ಕಾರ, 'ಆಪರೇಷನ್ ರೈಸ್' ಹಾಗೂ 'ಬೇಡ ಬ್ರೋ'** ಎಂಬ, ಮಾದಕ ವಸ್ತು ಸೇವನೆ ಹಾಗೂ ಸಾಗಣೆ ವಿರುದ್ಧದ, ವಿಶೇಷ ಜನ ಜಾಗೃತಿ ಆಂದೋಲನ ಆರಂಭಿಸಿದೆ ಎಂದು, ಪೊಲೀಸ್ ವರಿಷ್ಠಾಧಿಕಾರಿಗಳಾದ, ಕೋಲಾರ ಜಿಲ್ಲೆಯ ಕನಿಕಾ ಸಿಕ್ರಿವಾಲ್, ಯಾದಗಿರಿ ಜಿಲ್ಲೆಯ, ಪೃಥ್ವಿಕ್ ಶಂಕರ ಹಾಗೂ ಚಾಮರಾಜನಗರದ ಎಂ.ಮುತ್ತುರಾಜ ತಿಳಿಸಿದ್ದಾರೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಧಾರವಾಡ, ಬಾಗಲಕೋಟೆ** ಸೇರಿದಂತೆ, 4 ಜಿಲ್ಲೆಗಳ, ಅಮೃತ ಭಾರತ ರೈಲು ನಿಲ್ದಾಣಗಳು, ಇಂದು ಪ್ರಧಾನಮಂತ್ರಿಯವರಿಂದ, ಲೋಕಾರ್ಪಣೆ.
- **'ಭಾರತ್ ಟೆಕ್ಸ್ 2026'**; ರಾಜ್ಯದಿಂದ, 2 ಸಾವಿರದ 8 ನೂರು ಕೋಟಿ ಮೌಲ್ಯದ, 12 ಹೂಡಿಕೆ ಒಪ್ಪಂದ.
- **ಅರ್ಹ ನಾಗರಿಕರು,** ಮತದಾರರ ಪಟ್ಟಿಯಲ್ಲಿ, ಹೆಸರು ನೋಂದಾಯಿಸಲು, ಸ್ವೀಪ್ ಸಮಿತಿಯಿಂದ, ಜನ ಜಾಗೃತಿ.
- **ಖೇಲೋ ಇಂಡಿಯಾ:** ಧಾರವಾಡದಲ್ಲಿ, ಇಂದು ಮತ್ತು ನಾಳೆ, ಮಲ್ಲಕಂಬ ಕ್ರೀಡೋತ್ಸವ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>